ಪ್ರಧಾನ ಸಿ.ಜೆ. ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮದ್ದೂರು
ದಿಃ05-08-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಕೆ ವಕೀಲರವರಿಂದಃ

ವಾದಿ ಮತ್ತು ಪ್ರತಿವಾದಿಯವರಿಗೆ ಎಷ್ಟು ವಿಸ್ತೀರ್ಣದ ಜಮೀನು ಇತ್ತು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆದರೆ ನಮ್ಮ ಪಕ್ಕದಲ್ಲೇ ಜಮೀನು ಇತ್ತು ಎನ್ನುತ್ತಾರೆ. ನಮ್ಮ ಪಕ್ಕದಲ್ಲಿ ಜಮೀನು ಇರದೇ ನಿವೇಶನವಿತ್ತು. ಸದರಿ ನಿವೇಶನ ಸಂಖ್ಯೆ ನನಗೆ ಗೊತ್ತಿಲ್ಲ. ನಮ್ಮ ನಿವೇಶನದ ಪೂರ್ವ ದಿಕ್ಕಿಗೆ ಸದರಿ ವಾದಿ ಮತ್ತು ಪ್ರತಿವಾದಿಯ ನಿವೇಶನವಿತ್ತು. ಸದರಿ ಪೂರ್ವಕ್ಕೆ ವಾದಿ ಅಥವಾ ಪ್ರತಿವಾದಿ-1 ಅಥವಾ ಮೊಜ್ಜೇಗೌಡರವರ ಯಾರಾ ಜಮೀನು ಇತ್ತು ಎಂದರೆ ಸಾಕ್ಷಿಯು ಮೊದಲಿಗೆ ಎಲ್ಲರ ಜಮೀನು ಇತ್ತು ಎನ್ನುತ್ತಾರೆ. ನನ್ನ ನಿವೇಶನದ ಪಕ್ಕದಲ್ಲಿ ವಾದಿ ಮರಿಲಿಂಗಯ್ಯರವರ ನಿವೇಶನವಿತ್ತು. ಸದರಿ ವಾದಿ ಮರಿಲಿಂಗಯ್ಯರವರ ವಿಸ್ತೀರ್ಣ 72 ಇಂಟು 45 ಅಡಿ ಇತ್ತು ಅದರಂತೆ ಮೊಜ್ಜೇಗೌಡ ಮತ್ತು ಪ್ರತಿವಾದಿ-1 ರವರ ಹೆಸರಿನಲ್ಲಿ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ಹೆಸರಿನಲ್ಲಿದ್ದ ನಿವೇಶನವನ್ನು ನಾನು ಬೇರೆಯವರಿಗೆ ಸುಮಾರು 6 ತಿಂಗಳ ಹಿಂದೆ ಮಾರಾಟ ಮಾಡಿದ್ದೇನೆ. ವಾದಿ ಮತ್ತು ಮೊಜ್ಜೇಗೌಡ ಹಾಗೂ ಪ್ರತಿವಾದಿ-1 ರವರು ವಿಭಾಗ ಆಗಿರುವುದನ್ನು ನಾನು ನೋಡಿಲ್ಲ. ಸದರಿಯವರಿಗೆ ಯಾವ್ಯಾವ ಜಮೀನುಗಳು ಮತ್ತು ನಿವೇಶನಗಳು ಬಂದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪಕ್ಕದಲ್ಲಿ ನಿವೇಶನವಿದ್ದರಿಂದ ಅದು ಮಾತ್ರ ಗೊತ್ತು ಎನ್ನುತ್ತಾರೆ. ನಾನು ಮಾರಾಟ ಮಾಡಿದ ನಮ್ಮ ನಿವೇಶನದ ಚಕ್ಕುಬಂಧಿ ಪೂರ್ವಕ್ಕೆ 1 ನೇ ಪ್ರತಿವಾದಿಯ ಜಮೀನು ಪಶ್ಚಿಮಕ್ಕೆ ಸಾರ್ವಜನಿಕ ರಸ್ತೆ, ಉತ್ತರಕ್ಕೆ ಗೆಜ್ಜೆ ಬೋರೆಗೌಡರವರ ಮನೆ, ದಕ್ಷಿಣಕ್ಕೆ ಹಾಲಿನ ಡೈರಿ. ವಾದಿ ಮರಿಲಿಂಗಯ್ಯರವರ ನಿವೇಶನದ ಚಕ್ಕುಬಂಧಿ ಪೂರ್ವಕ್ಕೆ ಸೋಮಪ್ಪರವರ ಜಮೀನು, ಪಶ್ಚಿಮಕ್ಕೆ ನಮ್ಮ ಜಮೀನು, ಉತ್ತರಕ್ಕೆ ಮಲ್ಲಯ್ಯರವರ ಜಮೀನು, ದಕ್ಷಿಣಕ್ಕೆ ಡೈರಿ ಇದೆ. ನಮ್ಮ ಮತ್ತು ಮರಿಲಿಂಗಯ್ಯರವರ ನಿವೇಶನದ ನಡುವೆ ಯಾವುದೇ ಜಾಗವಿರುವುದಿಲ್ಲ. ಅದರಂತೆ ಮೊಜ್ಜೇಗೌಡ ಮತ್ತು ಚೆನ್ನಯ್ಯರವರ ನಿವೇಶನದ ನಡುವೆ ಅಂತರವಿದೆ ಎಂದರೆ ಸದರಿ ಮೊಜ್ಜೇಗೌಡರವರ ತಮ್ಮ ಮಧ್ಯದಲ್ಲಿ ತಳಪಾಯ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ವಾದಿಯ ನಿವೇಶನದ ಪಕ್ಕದಲ್ಲಿ ಅವರ ಅಣ್ಣನ ಮಗನ ನಿವೇಶನವಿದೆ ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ನಿವೇಶನಗಳ ನಡುವೆ ಯಾವುದೇ ರಸ್ತೆ ಇಲ್ಲ ಎಂದರೆ ಸಾಕ್ಷಿಯು ತಿರುಗಾಡಲು ರಸ್ತೆ ಬಿಟ್ಟುಕೊಂಡಿದ್ದೇವೆ ಆದರೆ ಎಷ್ಟು ಅಡಿ ಎಂದು ನನಗೆ ಗೊತ್ತಿಲ್ಲ. ನನಗೆ ದಾವೆಯ ಬಗ್ಗೆಯಾಗಲೀ ಸ್ಥಳದ ಬಗ್ಗೆಯಾಗಲೀ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸುಳ್ಳು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿರುಗಾಡಲು ಯಾವುದೇ ರಸ್ತೆ ಬಿಟ್ಟುಕೊಂಡಿಲ್ಲದಿದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ-1ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 40 ವರ್ಷದಿಂದ ಮಾಲಗಾರನಹಳ್ಳಿಯಲ್ಲಿ ವಾಸವಿರದೇ ಗೊರವನಹಳ್ಳಿಯಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 6 ತಿಂಗಳ ಹಿಂದೆ ಮಾರಾಟ ಮಾಡಿದ್ದೇನೆ ಎನ್ನುತ್ತಾರೆ. ಮಾಲಗಾರನಹಳ್ಳಿಯ ಹೆಸರಿನಲ್ಲಿ ಮತದಾರರ ಗುರುತಿನ ಚೀಟಿಯಾಗಲೀ ಅಥವಾ ಪಡಿತರ ಚೀಟಿಯಾಗಲೀ ಇರುವುದಿಲ್ಲ. ನಾನು ಮಾಲಗಾರನಹಳ್ಳಿಯಲ್ಲಿ ವಾಸಿಸುತ್ತಿದ್ದಲ್ಲಿ ಸದರಿ ಗ್ರಾಮದ ವಿಳಾಸದ ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿ ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು